**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816/2021**

**ಪ್ರಾಸಾಃ- 35 ಚಾಸಾಃ- 34**

| | | |
|---|---|---|
| ಸಾಕ್ಷಿಯ ಹೆಸರು | : | ವಸಂತ್ ಕುಮಾರ್ |
| ತಂದೆಯ ಹೆಸರು | : | ಈರಣ್ಣ |
| ವಯಸ್ಸು | : | 45 ವರ್ಷ |
| ವೃತ್ತಿ | : | ಫೆಡ್ ಬ್ಯಾಂಕ್‌ನಲ್ಲಿ ಮ್ಯಾನೇಜರ್ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 26.9.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ಫೆಡ್ ಬ್ಯಾಂಕ್, ಕಾರ್ ಸ್ಟ್ರೀಟ್ ಬಳ್ಳಾರಿಯಲ್ಲಿ ಮ್ಯಾನೇಜರ್ ಆಗಿ 2021 ರಿಂದ 2022 ರವರೆಗೆ ಕೆಲಸ ಮಾಡಿದ್ದೇನೆ. ಚಾಸಾ 1, 6, 7, 24 ಮತ್ತು ಆರೋಪಿ 1 ರವರ ಪರಿಚಯ ಇದೆ. ದಿಃ 17-4-2021 ರಂದು ಚಾಸಾ 24 ರವರು ಎರಡು ಬಂಗಾರದ ಚೈನುಗಳನ್ನು ಒತ್ತೆ ಇಡಲು ನಮ್ಮ ಬ್ಯಾಂಕ್‌ಗೆ ಬಂದಿದ್ದರು. ದಿಃ 16-6-2021 ರಂದು ಪೋಲೀಸರು ನಮ್ಮ ಬ್ಯಾಂಕ್‌ಗೆ ಪಂಚನಾಮೆ ಮಾಡಲು ಬಂದಿದ್ದರು. ಸದರಿ ಪಂಚನಾಮೆ ಸಮಯದಲ್ಲಿ ಪೋಲೀಸರು ನನಗೆ ಚಾಸಾ 24 ರವರು ನಮ್ಮ ಬ್ಯಾಂಕ್ ನಲ್ಲಿ ಬಂಗಾರದ ಚೈನುಗಳನ್ನು ಇಟ್ಟ ಬಗ್ಗೆ ವಿಚಾರಿಸಿದ್ದರು. ಆ ಸಮಯದಲ್ಲಿ ಪೋಲೀಸರು ನಿಪಿ-8 ರಂತೆ ಪಂಚನಾಮೆಯನ್ನು ಮಾಡಿ ಪೋಟೋಗಳನ್ನು ತೆಗೆದು ವೀಡಿಯೋ ಮಾಡಿಕೊಂಡಿದ್ದರು. ನಿಪಿ-8 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-8(ಇ) ಎಂದು ಗುರುತಿಸಲಾಯಿತು. ನಿಪಿ-9 ಮತ್ತು ನಿಪಿ-9 ಎ ರಂತೆ ಪೋಟೋಗಳನ್ನು ಪಂಚನಾಮೆ ಸಮಯದಲ್ಲಿ ತೆಗೆದಿದ್ದರು. ಅದರ ಸಿಡಿ ನಿಪಿ-97 ಆಗಿದೆ. ಸಾಕ್ಷಿಗೆ ನಿಪಿ-97 ವೀಡಿಯೋ ಸಿಡಿಯನ್ನು ಪ್ಲೇ ಮಾಡಿ ತೋರಿಸಿದಾಗ ಅದನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ 24 ಪಂಚನಾಮೆ ಸಮಯದಲ್ಲಿ ಬಂಗಾರದ ಚೈನನ್ನು 1 ನೇ ಆರೋಪಿ ತನಗೆ ಕೊಟ್ಟಿದ್ದ ಎಂದು ಮತ್ತು ತಾನು ಅದನ್ನು ಬ್ಯಾಂಕ್‌ಗೆ ಒತ್ತೆ ಇಟ್ಟಿದ್ದೆ ಎಂದು ತಿಳಿಸಿದ್ದ. ಚಾಸಾ 1 ಪಂಚನಾಮೆ ಸಮಯದಲ್ಲಿ ಬಂಗಾರದ ಚೈನುಗಳು ತನ್ನವು ಎಂದು ನೋಡಿ ಗುರುತಿಸಿದ್ದಳು.

ಮರುದಿನ ಚಾಸಾ 24 ಮತ್ತು ಪೋಲೀಸರು ಪುನಃ ಬ್ಯಾಂಕ್‌ಗೆ ಬಂದಿದ್ದರು. ಆ ಸಮಯದಲ್ಲಿ ಚಾಸಾ 24 ರವರು ರೂ.1,50,000 ಹಣವನ್ನು ಭಾಗಶಃ ಸಾಲ ಮರುಪಾವತಿಗಾಗಿ ಕೊಟ್ಟಿದ್ದ ಬಗ್ಗೆ ಬ್ಯಾಂಕ್‌ನಿಂದ ರಸೀದಿಯನ್ನು ಪೋಲೀಸರಿಗೆ ಕೊಟ್ಟಿದ್ದೆ. ಅದು ನಿಪಿ-46 ಆಗಿದೆ.

ದಿಃ 26-6-2021 ರಂದು ಪುನಃ ಚಾಸಾ 24 ಮತ್ತು ಪೋಲೀಸರು ಪುನಃ ಬ್ಯಾಂಕ್ ಗೆ ಬಂದಿದ್ದರು.ಆ ಸಮಯದಲ್ಲಿ ಚಾಸಾ 24 ರವರು ರೂ.1,45,000 ಹಣವನ್ನು ಭಾಗಶಃ ಸಾಲ ಮರುಪಾವತಿಗಾಗಿ ಕೊಟ್ಟಿದ್ದ ಬಗ್ಗೆ ಬ್ಯಾಂಕ್ ನಿಂದ ರಸೀದಿಯನ್ನು ಪೋಲೀಸರಿಗೆ ಕೊಟ್ಟಿದ್ದೆ. ಅದು ನಿಪಿ-47 ಆಗಿದೆ.

ದಿಃ 1-7-2021 ರಂದು ಪೋಲೀಸರು ಮತ್ತು ಚಾಸಾ 24 ರವರು ಬ್ಯಾಂಕ್‌ಗೆ ಬಂದಿದ್ದರು. ಚಾಸಾ 24 ರವರು ಬಾಕಿ ಉಳಿದ ರೂ.300 ಹಣವನ್ನು ಬ್ಯಾಂಕ್‌ಗೆ ನೀಡಿ ಒತ್ತೆ ಇಟ್ಟ ಬಂಗಾರದ ಚೈನುಗಳನ್ನು ಬಿಡಿಸಿಕೊಂಡಿದ್ದ. ಆ ಸಮಯದಲ್ಲಿ ನಿಪಿ-45 ರಂತೆ ರಸೀದಿ ಕೊಟ್ಟಿದ್ದೆ. ಸದರಿ ಚೈನುಗಳನ್ನು ಕೊಡುವ ಸಮಯದಲ್ಲಿ ಪೋಲೀಸರು ನನ್ನ ಸಮಕ್ಷಮ ನಿಪಿ-43 ರಂತೆ ಪಂಚನಾಮೆಯನ್ನು ಮಾಡಿದ್ದರು. ನಿಪಿ-43 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-43(ಸಿ) ಎಂದು ಗುರುತಿಸಲಾಯಿತು. ನಾನು ಚಾಸಾ 24 ರವರಿಗೆ ವಾಪಾಸ್ಸು ಮಾಡಿದ ಬಂಗಾರದ ಸರಗಳು ಮು ಮಾ 4 ಮತ್ತು 5 ಆಗಿವೆ. ಆ ಸಮಯದಲ್ಲಿ ನಿಪಿ-44 ರಂತೆ ಪೋಟೋಗಳನ್ನು ತೆಗೆಯಲಾಯಿತು. ಸಾಕ್ಷಿಯು 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಬಂಗಾರದ ಚೈನುಗಳನ್ನು ಯಾವ ಕಾರಣಕ್ಕೆ ಚಾಸಾ 24 ರವರಿಗೆ 1 ನೇ ಆರೋಪಿ ಕೊಟ್ಟಿದ್ದ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

1 ನೇ ಆರೋಪಿಯು ಚಾಸಾ 1 ರವರ ತಾಯಿ ಮತ್ತು ತಂಗಿಯನ್ನು ಕೊಲೆ ಮಾಡಿ ಅವರ ಕೊರಳಲ್ಲಿದ್ದ ಮು ಮಾ 4 ಮತ್ತು 5 ಚೈನುಗಳನ್ನು ತೆಗೆದುಕೊಂಡು ಅವುಗಳನ್ನು ಚಾಸಾ 24 ರವರಿಗೆ ಕೊಟ್ಟಿದ್ದ ಎಂಬ ಸಂಗತಿ ನನಗೆ ನಂತರ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಸದರಿ ಸಂಗತಿ ನನಗೆ ತಿಳಿದಿದ್ದರೂ

ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ಚಾಸಾ 1 ರವರು ನನ್ನ ಮುಂದೆ ಮು ಮಾ 4 ಮತ್ತು 5 ಚೈನುಗಳನ್ನು ಖರೀದಿ ಮಾಡಿದ್ದ ಬಗ್ಗೆ ಬಿಲ್ಲುಗಳನ್ನು ಹಾಜರು ಪಡಿಸಿರಲಿಲ್ಲ. ಮು ಮಾ 4 ಮತ್ತು 5 ತರಹದ ಚೈನುಗಳು ಸಾಮಾನ್ಯವಾಗಿ ಬೆಳ್ಳಿ ಬಂಗಾರದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**